**O.S. 115-15 DW-1**

**ಸತ್ಯ ಪ್ರತಿಜ್ಞೆ ಮೇರೆಗೆ ದಿನಾಂಕಃ 07.04.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ M V S, ವಕೀಲರಿಂದಃ**

18. ನಾನು ಈ ಹಿಂದೆ ಸಾಕ್ಷಿ ನುಡಿದಿದ್ದು ನೆನಪಿದೆ. ಕಚೇರಿಯಲ್ಲಿ ಕುಳಿತು ಆಸ್ತಿ ಬಗ್ಗೆ ಕಾನೂನು ಅಭಿಪ್ರಾಯ ಪಡೆದ ದಾಖಲೆ ನೋಡಿಲ್ಲ. ಖರೀದಿ ಪತ್ರವಾಗುವ ಅಂದಾಜು 1 ತಿಂಗಳು ಮುಂಚೆ ಆಸ್ತಿ ನೋಡಲು ಹೋಗಿದ್ದೆವು. ಪ್ರತಿವಾದಿ 1 ಹಾಗೂ 2 ಹಾಗೂ ಇನ್ನೊಬ್ಬ ವ್ಯಕ್ತಿ ಕರೆದುಕೊಂಡು ಹೋಗಿದ್ದರು. ಆಸ್ತಿ ಸುತ್ತಮುತ್ತ ಪ್ರತಿವಾದಿಗಳ ಜಮೀನುಗಳಿವೆ. ಖರೀದಿ ಪತ್ರದಲ್ಲಿ ದಕ್ಷಿಣಕ್ಕೆ ಮಹಾಜನ ಶೇಠ ಅಂತಾ ಬರೆಯಲಾಗಿದೆ. ಆತನ ಖರೀದಿ ಪತ್ರವು ಅದೇ ದಿನ ಆಗಿದೆ. ಖರೀದಿ ಯಾದ ತಕ್ಷಣ ಮುಟೇಶನ್ ಆಗುವುದಿಲ್ಲ ಅರ್ಜಿ ಕೊಟ್ಟು 1 ಹಾಗೂ 2 ವಾರಗಳ ನಂತರ ಆಗುತ್ತವೆ. 3 ಖರೀದಿ ಪತ್ರಗಳನ್ನು ಹಾಜರಪಡಿಸಿದ್ದೇನೆ. ನಿಪಿ.10 ಖರೀದಿ ಪತ್ರದಲ್ಲಿ ಚಕ್ಕುಬಂದಿಯಲ್ಲಿ ಉತ್ತರಕ್ಕೆ ಇದೆ ನಂಬರ ಪೈಕಿ ಭರತ ಮಹಾಜನ ಸೇಠ ಕೊಟ್ಟ ಜಮೀನು ಎಂದು ಬರೆಯಲಾಗಿದೆ ಅಂದರೆ ಸರಿ. ನಿಪಿ.11 ರಲ್ಲಿ ಉತ್ತರಕ್ಕೆ ಇದೇ ನಮ್ಮ ಪೈಕಿ ವಿನೋದ ತಲೆಸರ ರವರಿಗೆ ಕೊಟ್ಟ ಜಮೀನು ದಕ್ಷಿಣಕ್ಕೆ ಇದೇ ಪೈಕಿ ನಂಬರ ಸತೀಶ ಹಬೀಬ ರವರಿಗೆ ಕೊಟ್ಟ ಜಮೀನು ಎಂದು ಬರೆಯಲಾಗಿದೆ ಅಂದರೆ ಸರಿ. ಈ ಖರೀದಿ ಕೊಟ್ಟವರು ಜಮೀನ ಪಕ್ಕದಲ್ಲಿರುವವರನ್ನು ವಿಚಾರಣೆ ಮಾಡಿದ್ದೀರಾ ಎಂಬ ವಕೀಲರ ಪ್ರಶ್ನೆಗೆ ಖರೀದಿ ಕೊಟ್ಟವರ ಜಮೀನುಗಳಿವೆ ಎಂದು ಹೇಳುತ್ತಾರೆ. ಸ್ಥಳಕ್ಕೆ ಹೋಗಿ ಸತ್ಯ ಸಂಗತಿ ಗೊತ್ತಾಗುತ್ತದೆ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ಆಸ್ತಿ ಮಾಲಿಕರಿಗೆ ಹಣ ಕೊಡುತ್ತಾರೆ ಅಂದರೆ ಸರಿ. 1) ಹನಮಂತಗೌಡ ಬಸನಗೌಡ ಹಳ್ಳದ 2) ಶ್ರೀಮತಿ ರುದ್ರವ್ವ ಶಿವಾನಂದ ಹೂಗಾರ 3) ಮಂಜುನಾಥ ಬಸನಗೌಡ ಹಳ್ಳದ ರವರು ಏನು ಸಂಬಂಧ ಎಂಬ ವಕೀಲರ ಪ್ರಶ್ನೆಗೆ ಪ್ರತಿವಾದಿಗಳ ಲಿಸ್ಟ ಪ್ರಕಾರ ನಾವು ಹಣ ಕೊಟ್ಟಿದ್ದೇವೆಂದು ಹೇಳುತ್ತಾರೆ ನಾವು ಅವರ ಹೆಸರು ಪಹಣಿಯಲ್ಲಿ ಇದ್ದ ಬಗ್ಗೆ ವಿಚಾರಣೆ ಮಾಡಿದ್ದೇವೆ. ಅವರ ಹೆಸರು ಪಹಣಿಯಲ್ಲಿದ್ದು ಪರೀಶೀಲನೆ ಮಾಡಬೇಕಾಗುತ್ತದೆ ಎಂದು ಹೇಳುತ್ತಾರೆ.

**ಮುಂದುವರೆದ ಪಾಟೀ ಸವಾಲಿಗೆ ಪ್ರಕರಣವನ್ನು ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೆ.ಸ.ಎ. ಒಪ್ಪಿಕೊಳ್ಳಲಾಯಿತು.

ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು
ಹಾಗೂ ಜೆ ಎಂ ಎಫ್ ಸಿ, ಹುಬ್ಬಳ್ಳಿ.